# ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಕರ್ನಾಟಕ

ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-560001. ದೂರವಾಣಿ : 080-22224212


ಸಂಖ್ಯೆ : ಸಿಆಸುಇ 16 ಮಾಸ(ಅಮುಚು 3)2018 ದಿನಾಂಕ : 11-5-2018.

## ಪತ್ರಿಕಾ ಪ್ರಕಟಣೆ

ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಿಂದ ಸಂಗ್ರಹಿಸಿದ ಮಾಹಿತಿಯ ಆಧಾರದ ಮೇಲೆ ಮಾದರಿ ನೀತಿ ಸಂಹಿತೆ ಉಲ್ಲಂಘನೆ ಮತ್ತು ಕಾನೂನು ಮತ್ತು ಸುವ್ಯವಸ್ಥೆ ಜಾರಿ ಕುರಿತಾದ ಮಾಹಿತಿಯನ್ನು ಒದಗಿಸಲಾಗಿದೆ.

**ಮಾದರಿ ನೀತಿ ಸಂಹಿತೆ**

1540 ಫ್ಲೈಯಿಂಗ್ ಸ್ಕ್ವಾಡ್ಸ್ ಮತ್ತು 2131 ಸ್ಟಾಟಿಕ್ ಸರ್ವೆಲೆನ್ಸ್ ಟೀಮ್ಸ್‌ಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿವೆ. ಮಾದರಿ ನೀತಿ ಸಂಹಿತೆ ಜಾರಿಗಾಗಿ ರಚಿಸಿದ ಫ್ಲೈಯಿಂಗ್ ಸ್ಕ್ವಾಡ್ಸ್ ಮತ್ತು ಇತರೆ ಮಾದರಿ ನೀತಿ ಸಂಹಿತೆ ತಂಡಗಳು 12537 ಗೋಡೆಬರಹಗಳು, 17693 ಪೋಸ್ಟರ್‌ಗಳು ಮತ್ತು 7,711 ಬ್ಯಾನರ್‌ಗಳನ್ನು ಸಾರ್ವಜನಿಕ ಸ್ಥಳಗಳಿಂದ ತೆಗೆದುಹಾಕಲಾಗಿದೆ ಹಾಗೂ Karnataka Open Places (Provision of Disfigurement) Act 1981 ಪ್ರಕಾರ 06 ಪ್ರಕರಣಗಳನ್ನು ನೋಂದಾಯಿಸಲಾಗಿದೆ. ಖಾಸಗಿ ಜಾಗಗಳಲ್ಲಿ ಒಟ್ಟಾರೆ 6,866 ಗೋಡೆ ಬರಹ, 7,949 ಪೋಸ್ಟರ್‌ಗಳು ಮತ್ತು 2,543 ಬ್ಯಾನರ್‌ಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ತೆಗೆದುಹಾಕಲಾಗಿದೆ.

ಇದಲ್ಲದೇ, ಕಳೆದ 24 ಗಂಟೆಗಳಲ್ಲಿ **24,35,500/- ರೂ.**ಗಳ ನಗದು, ರೂ. 6,00,000/- ಮೌಲ್ಯದ 3 ವಾಹನಗಳು ಮತ್ತು ಮತ್ತಿತರ ವಸ್ತುಗಳು : 178 ಬೆಳ್ಳಿ ಸಾಮಾಗ್ರಿಗಳು ವಶಪಡಿಸಿಕೊಂಡಿವೆ. ಒಟ್ಟಾರೆ ಸ್ಟಾಟಿಕ್ ಸರ್ವೆಲೆನ್ಸ್ ತಂಡಗಳು **ರೂ.43,86,97,919/-** ನಗದು, **ರೂ.15,26,80,000/-** ಮೌಲ್ಯದ 49 ಕೆ.ಜಿ. 552 ಗ್ರಾಂ ಚಿನ್ನ, **ರೂ.15,97,200/-** ಮೌಲ್ಯದ ಬೆಳ್ಳಿ, **ರೂ.3,24,000/-** ಮೌಲ್ಯದ 268 ತಾಮ್ರದ ಬಿಂದಿಗೆಗಳು (600 ಕೆ.ಜಿ. ತೂಕ), ಒಟ್ಟು **ರೂ.2,38,60,447/-** ಮೌಲ್ಯದ 267.49 ಲೀ. ಮದ್ಯ, ವಾಹನ ಮತ್ತಿತರೆ ವಸ್ತುಗಳನ್ನು ವಶಪಡಿಸಿಕೊಂಡಿವೆ.

ಅಲ್ಲದೇ, ಕಳೆದ 24 ಗಂಟೆಗಳಲ್ಲಿ **ಫ್ಲೈಯಿಂಗ್ ಸ್ಕ್ವಾಡ್‌ಗಳು ರೂ.1,03,72,120/- ಗಳ** ನಗದು, 1 ಕೆ.ಜಿ. ಬೆಳ್ಳಿ, ರೂ. 20,94,170/- ಮೌಲ್ಯದ 18 ವಾಹನಗಳು, ರೂ.22,799/0 ಮೌಲ್ಯದ 82.26 ಲೀ.ಮದ್ಯ ಮತ್ತು ಮತ್ತಿತರ ವಸ್ತುಗಳು : ರೂ.4,700/- ಮೌಲ್ಯದ 47 ಸೀರೆ , ರೂ.400/- ಮೌಲ್ಯದ 2 ಮೊಬೈಲ್ ,ರೂ 6,630/- ಮೌಲ್ಯದ ಪಕ್ಷದ ಧ್ವಜಗಳು , ರೂ.30,000/- ಮೌಲ್ಯದ ಅಡುಗೆ ಸಾಮಗ್ರಿಗಳು , ರೂ.2,500 ಮೌಲ್ಯದ ಪಕ್ಷದ ಕರಪತ್ರಗಳನ್ನು ವಶಪಡಿಸಿಕೊಂಡಿದೆ. ಒಟ್ಟಾರೆ **ಫ್ಲೈಯಿಂಗ್ ಸ್ಕ್ವಾಡ್‌ಗಳು ರೂ.12,07,47,084/-** ನಗದು, 1036.977 ಲೀ. ಮದ್ಯ, 8640 ವಿಸ್ಕಿ ಬಾಟೆಲ್‌ಗಳು, **ರೂ.4,10,98,000/-** ಮೌಲ್ಯದ ಚಿನ್ನ, ರೂ.2,40,000/- ಮೌಲ್ಯದ 13.165 ಕೆ.ಜಿ. ಬೆಳ್ಳಿ ಹಾಗೂ **ರೂ.14,92,06,675/-** ಮೌಲ್ಯದ ಮತ್ತಿತರ ವಸ್ತುಗಳು, **ರೂ.3,86,21,340/-** ಮೌಲ್ಯದ 237 ವಾಹನಗಳನ್ನು ವಶಪಡಿಸಿಕೊಂಡಿವೆ. ಅಲ್ಲದೇ ಪೊಲೀಸ್ ಪ್ರಾಧಿಕಾರಿಗಳು ರೂ.10,000/- ನಗದು, ರೂ. 1,41,543/- ಮೌಲ್ಯದ 433.60 ಲೀ ಮದ್ಯ ಮತ್ತು 1 ವಾಹನವನ್ನು ವಶಪಡಿಸಿಕೊಂಡಿದೆ. ಒಟ್ಟಾರೆ ಇತರೆ ಪೊಲೀಸ್ ಪ್ರಾಧಿಕಾರಗಳು ರೂ.42,45,000/- ಮೌಲ್ಯದ ನಗದು, ರೂ.16,99,58,047/- ಮೌಲ್ಯದ 44.755 ಕೆ.ಜಿ. ಚಿನ್ನ, ರೂ.2,60,930/- ಮೌಲ್ಯದ ಡಿಬಿಬಿಎಲ್ ಗನ್ ನಂ.18126 ಮತ್ತು 5 ಕಾಟ್ರಿಡ್ಜ್‌ಗಳು, 135 ಸೀರೆಗಳು, 160 ಲ್ಯಾಪ್‌ಟಾಪ್ ಮತ್ತು 1199.773 ಲೀ. ಮದ್ಯ, 10 ವಾಹನ ಮತ್ತು ಮತ್ತಿತರ ವಸ್ತುಗಳನ್ನು ವಶಪಡಿಸಿಕೊಂಡಿವೆ.

ಒಟ್ಟಾರೆ ಫ್ಲೈಯಿಂಗ್ ಸ್ಕ್ವಾಡ್‌ಗಳ ತಂಡ, ಎಸ್‌ಎಸ್‌ಟಿ ಮತ್ತು ಇತರೆ ಪೊಲೀಸ್ ಪ್ರಾಧಿಕಾರಗಳು **ರೂ.56,36,90,003/-** ನಗದನ್ನು ವಶಪಡಿಸಿಕೊಂಡಿವೆ.

. . . .2

ಫ್ಲೈಯಿಂಗ್ ಸ್ಕ್ವಾಡ್‌ಗಳ ತಂಡ ಮತ್ತು ಇತರೆ ಪೊಲೀಸ್ ಪ್ರಾಧಿಕಾರಗಳು ನೀತಿ ಸಂಹಿತೆ ಉಲ್ಲಂಘನೆಗೆ ಸಂಬಂಧಿಸಿದಂತೆ ಕಳೆದ 24 ಗಂಟೆಗಳಲ್ಲಿ **53** ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಿಸಿದೆ. ಒಟ್ಟಾರೆಯಾಗಿ ಫ್ಲೈಯಿಂಗ್ ಸ್ಕ್ವಾಡ್‌ಗಳು **1124** ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಿಸಿದೆ. ಎಸ್‌ಎಸ್‌ಟಿಗಳು ನಗದು ಮತ್ತಿತರ ವಸ್ತುಗಳಿಗೆ ಸಂಬಂಧಿಸಿದಂತೆ **7** ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸಿದೆ. ಒಟ್ಟು **165** ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಿಸಿದೆ.

ಕಳೆದ 24 ಗಂಟೆಗಳಲ್ಲಿ, ಅಬಕಾರಿ ಇಲಾಖೆಯು **1132.35 ಲೀ.** ಗಳಷ್ಟು ಐಎಂಎಲ್ ಮದ್ಯವನ್ನು ಮತ್ತು **ರೂ.6,52,758.15 ಮೌಲ್ಯ**ದ ಇತರೆ ಮದ್ಯವನ್ನು ವಶಪಡಿಸಿಕೊಂಡು **52** ಪ್ರಕರಣಗಳನ್ನು ದಾಖಲಿಸಿದೆ. ಮದ್ಯದ ಪರವಾನಿಗೆಯನ್ನು ಉಲ್ಲಂಘಿಸಿದ **44** ಪ್ರಕರಣಗಳನ್ನು ದಾಖಲಿಸಲಾಗಿದೆ. ಕರ್ನಾಟಕ ಅಬಕಾರಿ ಕಾಯ್ದೆ 1965ರ ಪರಿಚ್ಛೇದ 15 (ಎ) ಅನ್ವಯ **282** ಪ್ರಕರಣಗಳನ್ನು ದಾಖಲಿಸಲಾಗಿದೆ. ಒಟ್ಟಾರೆ **ರೂ. 24,29,43,090.20** ಮೌಲ್ಯದ ಐಎಂಎಲ್ ಹಾಗೂ ಇತರೆ ಮದ್ಯ ಸೇರಿ **524258.547 ಲೀ.**ಗಳಷ್ಟು ಮದ್ಯವನ್ನು ವಶಪಡಿಸಿಕೊಳ್ಳಲಾಗಿದೆ. **2427** ಪ್ರಕರಣಗಳು, ಮದ್ಯದ ಪರವಾನಿಗೆಯನ್ನು ಉಲ್ಲಂಘಿಸಿದ **2561** ಪ್ರಕರಣಗಳು, ಎನ್‌ಡಿಪಿಎಸ್ ಕಾಯ್ದೆಯಡಿ **3** ಪ್ರಕರಣಗಳನ್ನು ಹಾಗೂ ಕರ್ನಾಟಕ ಅಬಕಾರಿ ಕಾಯ್ದೆ 1965ರ ಪರಿಚ್ಛೇದ 15 (ಎ) ಅನ್ವಯ **8909** ಪ್ರಕರಣಗಳನ್ನು ಹಾಗೂ ದಾಖಲಿಸಲಾಗಿದೆ ಮತ್ತು **1057** ವಿವಿಧ ಮಾದರಿಯ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

**ಕಾನೂನು ಮತ್ತು ಸುವ್ಯವಸ್ಥೆ**

ಕಳೆದ 24 ಗಂಟೆಗಳಲ್ಲಿ ಸಿಆರ್‌ಪಿಸಿ ಕಾಯ್ದೆಯಡಿ **204** ವ್ಯಕ್ತಿಗಳಿಂದ ಮುಚ್ಚಳಿಕೆಯನ್ನು ಪಡೆಯಲಾಗಿದೆ. **200** ಜಾಮೀನು ರಹಿತ ವಾರೆಂಟ್‌ಗಳನ್ನು ಹೊರಡಿಸಲಾಗಿದೆ. **9** ಪ್ರಕರಣಗಳನ್ನು ಸಿಆರ್‌ಪಿಸಿ ಕಾಯ್ದೆಯಡಿ ದಾಖಲು ಮಾಡಲಾಗಿದೆ. **803** ನಾಕಾಗಳನ್ನು ಕಾರ್ಯ ನಿರ್ವಹಿಸುವಂತೆ ಮಾಡಲಾಗಿದೆ. ಒಟ್ಟಾರೆ **71574** ಶಸ್ತ್ರಾಸ್ತ್ರಗಳನ್ನು ದಾಸ್ತಾನು ಮಾಡಿಕೊಳ್ಳಲಾಗಿದೆ. ಈವರೆಗೆ ಒಟ್ಟು **97,043** ಶಸ್ತ್ರಾಸ್ತ್ರಗಳ ಪೈಕಿ **97,031** ಶಸ್ತ್ರಾಸ್ತ್ರಗಳನ್ನು ದಾಸ್ತಾನು ಮಾಡಿಕೊಳ್ಳಲಾಗಿದೆ. **52** ಶಸ್ತ್ರಾಸ್ತ್ರಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದ್ದು, ಒಟ್ಟು **6** ಶಸ್ತ್ರಾಸ್ತ್ರದ ಪರವಾನಿಗೆಯನ್ನು ರದ್ದುಪಡಿಸಲಾಗಿದೆ, ನೀತಿ ಸಂಹಿತೆ ಜಾರಿಯಾದ ದಿನದಂದ ಈವರೆಗೆ ಸಿಆರ್‌ಪಿಸಿ ಕಾಯ್ದೆಯಡಿಯಲ್ಲಿ **18096** ಪ್ರಕರಣಗಳನ್ನು ದಾಖಲಿಸಲಾಗಿದೆ ಹಾಗೂ ದಿನಾಂಕ: 01–01–2018 ರಿಂದ ಈವರೆಗೆ ಒಟ್ಟು **49574** ಪ್ರಕರಣಗಳನ್ನು ಸಿಆರ್‌ಪಿಸಿ ಕಾಯ್ದೆಯಡಿ ದಾಖಲಿಸಲಾಗಿದೆ. **24831** ವ್ಯಕ್ತಿಗಳಿಂದ ಮುಚ್ಚಳಿಕೆಯನ್ನು ಪಡೆಯಲಾಗಿದೆ. **40005** ಜಾಮೀನು ರಹಿತ ವಾರೆಂಟ್‌ಗಳನ್ನು ಚುನಾವಣೆ ಘೋಷಣೆಯಾದ ದಿನಾಂಕದಿಂದ ಈವರೆಗೆ ಹೊರಡಿಸಲಾಗಿದೆ.

–ಸಹಿ–
(ಸಂಜೀವ್ ಕುಮಾರ್)
ಮುಖ್ಯ ಚುನಾವಣಾಧಿಕಾರಿಗಳು ಮತ್ತು
ಪದನಿಮಿತ್ತ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಸಿಆಸುಇ, (ಚುನಾವಣೆಗಳು)